## 11

# ಆಶೀರ್ವದಿಸಲ್ಪಟ್ಟಂತಹ ಜೀವಿತದ ಮನುಷ್ಯ

## (2 ಅರಸು 5:1-17)

ಬೈಬಲ್ ಜೀವಿತಕ್ಕೆ ಕನ್ನಡಿಯನ್ನು ಹಿಡಿಯುವಂತದ್ದಾಗಿದೆ. ವರ್ಣಮಯ ವ್ಯಕ್ತಿತ್ವವನ್ನು ಹೊಂದಿದಂತಹ ವ್ಯಕ್ತಿಗಳ ಜೀವಿತದ ಪುಟಗಳನ್ನು ತಿರುಗಿಸುವಾಗ ಇತರರ ಹಾಗೂ ನಮ್ಮ ಪ್ರತಿಬಿಂಬವನ್ನು ಕಾಣದೇ ಇರಲಾರೆವು. ನಾಮಾನನ ಇತಿಹಾಸದಲ್ಲಿ, ನಾಮಾನನು ಅಸ್ವಸ್ಥನಾದದ್ದು, ಆತನು ಗುಣಹೊಂದಿದುರ ಸಾಮಾನ್ಯ ಪ್ರತಿಬಿಂಬಗಳನ್ನು ನಾವು ನೋಡುತ್ತೇವೆ. ವರ್ಣನೆಯಾದಂತಹ ನಾಮಾನನ ಶಾಂತವಾಗುವಿಕೆ ಮತ್ತು ಅಂತಿಮವಾಗಿ ಪರಿಹಾರವನ್ನು ಸ್ವೀಕರಿಸುವಿಕೆಯ ಬಗೆಗೆ ಬಣ್ಣಿಸಿದದ್ದನ್ನೂ ನಾವು ನೋಡುತ್ತೇವೆ.

### ರೋಗದ ಕಂಡು ಹಿಡಿಯುವಿಕೆ (5:1)

**"ಆದರೆ ಆತನು ಕುಷ್ಠರೋಗಿಯಾಗಿದ್ದನು"**

ಈ ಕಥೆಯು ನಾಮಾನನ ವರ್ಣನೆಯಿಂದ ಪ್ರಾರಂಭವಾಗುತ್ತದೆ. ಆತನು "ಅರಾಮ್ಯರ ಅರಸನ ಸೇನಾಪತಿಯಾಗಿದ್ದನು" (ವಚನ 1ಎ). ಆತನೊಬ್ಬ "ನಾಲ್ಕು ಸ್ಟಾರ್‌ಗಳನ್ನು ಹೊಂದಿದ ದಂಡನಾಯಕನಾಗಿರಬಹುದು" ಎಂದು ನಾವು ತಿಳಿಯಬಹುದು. "ಅರಸನಿಗೆ ಇವನು ಮಹಾಪುರುಷನಾಗಿದ್ದನು" (ವಚನ 1ಬಿ). ಬಾರ್ಕಲೆಯವರ ವಿವರಣೆಯಲ್ಲಿ ಇವನನ್ನು "ಮಹತ್ವದ ಅಧಿಕಾರಿ" ಎಂದು ಕರೆಯಲಾಗಿದೆ. ಆತನು "ಸನ್ಮಾನ ಯೋಗ್ಯನೆಂದು" (ವಚನ 1ಸಿ). ಎಣಿಸಲ್ಪಡುತ್ತಿದ್ದನು. ನಾವು ನೋಡುವಂತೆ, ಈತನು ಗೌರವಿಸಲ್ಪಡುತ್ತಿದ್ದನು ಮತ್ತು ತನ್ನ ಜೊತೆಯವರಿಂದ ಪ್ರೀತಿಸಲ್ಪಡುತ್ತಿದ್ದನು. "ಯೆಹೋವನು ಇವನ ಮುಖಾಂತರ ಅರಾಮ್ಯರಿಗೆ ಜಯವನ್ನು ಅನುಗ್ರಹಿಸಿದ್ದನು" (ವಚನ 1ಡಿ). ಆತನು ವಿಶ್ವಾಸಿಯಲ್ಲದಿದ್ದರೂ ಯೆಹೋವನು ಆತನ ಮೂಲಕ ಕಾರ್ಯಮಾಡುತ್ತಿದ್ದನು. ಆತನು "ಪರಾಕ್ರಮಶಾಲಿಯಾಗಿದ್ದನು" (ವಚನ 1ಇ). ಆತನು ಹಿಂದೆ ನಿಂತು ಕೊಂಡು ಹೋರಾಡುವ ವ್ಯಕ್ತಿಯಾಗಿರಲಿಲ್ಲ. ಆತನು ತನ್ನ ಶೌರ್ಯವನ್ನು ಪ್ರದರ್ಶಿಸಿದ್ದನು.

"ಆದರೆ" ಎಂಬ ಪದವು ಬರುವವರೆಗೂ ನಾವು ನಾಮಾನನ - ಬಗೆಗೆ ಮತ್ಸರವುಳ್ಳವ ರಾಗಿರುತ್ತೇವೆ. ಈ ಚಿಕ್ಕ ವಿರೋಧ ಸೂಚಕ ಜೋಡನಾಮ ಪದವು ನಮ್ಮ ಗ್ರಹಿಕೆಯನ್ನು ತಿರಗುಮುರುಗು ಮಾಡಿಬಿಡುತ್ತದೆ!

- ಆತನೊಬ್ಬ ಒಳ್ಳೆಯ ಮನುಷ್ಯನು, "*ಆದರೆ* ಸಿಟ್ಟು ಆತನ ಮೂಗಿನ ಮೇಲಿದೆ."
- "ಅವಳು ಒಳ್ಳೆಯ ಹೆಂಗಸು, ಆದರೆ ಅವಳು ತನ್ನ ನಾಲಿಗೆಯನ್ನು ತನ್ನ ಹಿಡಿತದಲ್ಲಿಟ್ಟುಕೊಳ್ಳಲಾರಳು."
- "ಅವಳು ಅದ್ಭುತವಾದ ಕೌಶಲ್ಯವನ್ನು ಹೊಂದಿದ್ದಾಳೆ ಮತ್ತು ಆತನೊಬ್ಬ ದೊಡ್ಡ ದೇವರ ಸೇವಕನಾಗಬಲ್ಲ." "ಆದರೆ ಆತನು ಲೌಕಿಕತೆಯನ್ನು ಬಿಡಲು ನಿರಾಕರಿಸುವವನಾಗಿದ್ದಾನೆ."
- "ಆತನೊಬ್ಬ ಶ್ರೇಷ್ಟ ಬೋಧಕ ಆದರೆ ಆತನು ತಾನು ಬೋಧಿಸಿದಂತೆ ನಡೆಯುವುದಿಲ್ಲ."

ನಾಮಾನನ ವಿವರಣೆಗೆ ಇಲ್ಲಿ ಕೊನೆಯಾದುದನ್ನು ಗಮನಿಸಿರಿ: "ಆದರೆ ಆತನು ಕುಷ್ಠ ರೋಗಿಯಾಗಿದ್ದನು" (ವಚನ 1 ಹೋಲಿಸಿರಿ). ಇದು ಒಬ್ಬ ಚಿತ್ರಕಾರನು, ಸುಂದರವಾದ ವರ್ಣಚಿತ್ರವನ್ನು ಚಿತ್ರಿಸುತ್ತಾನೆ ಮತ್ತು ಆತನು ತನ್ನ ಬ್ರಶನ್ನು ಕಪ್ಪು ಬಣ್ಣದಲ್ಲಿ ಅದ್ದುತ್ತಾನೆ ಚಿತ್ರದ ಮೇಲೆ ಹೊಡೆಯುತ್ತಾನೆ, ಅದರ ಸೌಂದರ್ಯತೆಯನ್ನು ಹಾಳುಮಾಡುತ್ತಾನೆ.

ಕುಷ್ಠವು ಪ್ರಾಚೀನಗಳನ್ನು ಕಾಲದಲ್ಲಿ ಭಯಪಡಿಸುವ ಕಾಯಿಲೆಯಾಗಿತ್ತು. ಇಸ್ರಾಯೇಲಿನಲ್ಲಿ, ಕುಷ್ಠರೋಗಿಗಳನ್ನು "ಅಶುದ್ಧರು! ಅಶುದ್ಧರು!" ಎಂದು ಕೂಗುತ್ತಿದ್ದರು (ಯಾಜಕ 13:45ಬಿ) - ಮತ್ತು ಜನರು ತಮ್ಮ ದಾರಿಗಳಿಂದ ಹೊರಟು ಹೋಗುವಂತೆ ಹೇಳುತ್ತಲೇ ಅವರು ತೆವಳಿಕೊಂಡು ಹೋಗುತ್ತಿದ್ದರು. ಕುಷ್ಠವು ಮೊದಲು ಕಾಣಿಸಿಕೊಂಡಾಗ, ಇದು ಚರ್ಮದ ಮೇಲೆ ವಿಕಾರವಾಗಿ ಕಾಣುತ್ತಿತ್ತು, ಆದರೆ ಕ್ರಮೇಣವಾಗಿ ಚರ್ಮವೆಲ್ಲ ಬಣ್ಣ ಕಳೆದು ಕೊಂಡು ಬಿಡುತ್ತಿತ್ತು. ದೇಹದ ಕಟ್ಟಕಡೆಯವರೆಗೆ ಸಣ್ಣ ಗೂಡು ರಚಿತವಾಗುತ್ತಿತ್ತು. ಹೆಚ್ಚಾದ ಸ್ಥಿತಿಯಲ್ಲಿ, ಅದು ಹತ್ತಿದ ಸ್ಥಳವು, ಕೀಲಿನಿಂದ ಕೀಲಿಗೆ ಬಿದ್ದುಹೋಗುತ್ತಿತ್ತು. ಬೆರಳು, ಕಾಲಿನ ಹೆಬ್ಬೆಟ್ಟು, ಕಿವಿಗಳು, ಅಥವಾ ಮೂಗೂ ಕೂಡಾ ಇಲ್ಲದ ಕುಷ್ಠರೋಗಿಯನ್ನು ನೋಡುವದು ಅಸಹ್ಯವಾದ್ದುದಾಗಿತ್ತು.

ಎಷ್ಟು ಪ್ರಶಂಸೆಗಳನ್ನು ನಾಮಾನನು ಹೊಂದಿದ್ದನು ಎಂಬುದು ಇಲ್ಲಿ ಮುಖ್ಯವಲ್ಲ, ಒಂದು ಸಂಗತಿಯು ಇನ್ನೂ ಉಳಿದಿದೆ: ಅದು ಆತನು ಕುಷ್ಠರೋಗಿಯಾಗಿದ್ದನು ಎಂಬುದೇ. ಆತನ ಬಗೆಗೆ ಅಸೂಯೆಪಡುವುದರ ಬದಲು, ಅರಾಮ್ಯದ ಒಬ್ಬ ಕನಿಷ್ಠ ದಾಸನೂ ಆತನೊಡನೆ ವ್ಯವಹರಿಸಲು ನಿರಾಕರಿಸುವವನಾಗಿದ್ದನು.

**"ಆದರೆ ನೀನು ಒಬ್ಬ ಪಾಪಿ"**

ಇಂದು ನಾವು ಒಂದನ್ನು ಅನ್ವಯವ ಮಾಡಿಕೊಳ್ಳೋಣವೇ? ಸಭೆಯ ಮೊದಲ ದಿನಗಳಲ್ಲಿ ಕುಷ್ಠವು ಪಾಪದ ಚಿಹ್ನೆಯಾಗಿ ಪರಿಗಣಿಸಲ್ಪಡುತ್ತಿತ್ತು. Warren Wiersbe ಬರೆಯುವುದೇನೆಂದರೆ,

> ಕುಷ್ಠವು ಪಾಪದ ಚಿತ್ರಣವೆಂದು ಯಾವುದೆ ನೇರ ಹೇಳಿಕೆಯು ಶಾಸ್ತ್ರ ವಚನಗಳಲಿಲ್ಲದ್ದಾಗ್ಯೂ, ಯಾಜಕಕಾಂಡ 13ನ್ನು ನೀವು ಓದಿದಾಗ, ಅದಕ್ಕೆ ಹೋಲಿಕೆಯನ್ನು ಸ್ಪಷ್ಟವಾಗಿ ಕಾಣುತ್ತೀರಿ. ಕುಷ್ಠದಂತಹ, ಪಾಪವು ಚರ್ಮಕ್ಕಿಂತ ಆಳವಾದುದ್ದ ಆಗಿತ್ತು (ವಚನ 3), ಇದು ಹರಡುವಂತಹದ್ದಾಗಿತ್ತು (ವಚನ 7), ಇದು ಅಪವಿತ್ರಗೊಳಿಸುವಂತಹದ್ದು (ವಚನ 45), ಇದು ಪ್ರತ್ಯೇಕಿಸಲ್ಪಡಬೇಕು (ವಚನ 46), ಮತ್ತು ಇದು ಕೇವಲ ಬೆಂಕಿಯಲ್ಲಿ ಮಾತ್ರ ಸರಿಹೊಂದುವಂತದ್ದಾಗಿದೆ (ವಚನಗಳು 52, 57).[1]

ಇತರರೂ ಕೂಡ ಇದಕ್ಕೆ ಹೋಲಿಕೆಯಾದದ್ದನ್ನೇ ಟಿಪ್ಪಣಿಸಿದ್ದಾರೆ. ಈ ಮುಂದಿನ ವಿಚಾರಗಳು F. W. Krummacher ರಿಂದ ತೆಗೆದುಕೊಳ್ಳಲ್ಪಟ್ಟದ್ದಾಗಿದೆ:

> ನಾವು ಪಾಪದ ಗುರುತಾಗಿರುವ ಚಿನ್ಹೆಯು ಇದಕ್ಕಿಂತ ಬೇರೆ ಎಲ್ಲಿಯೂ ಸಿಕ್ಕದು. ಇದು ವಾಸಿಮಾಡಲಾಗದ್ದರಿಂದ ಸಮಾನ್ಯವಾದ ಅರ್ಥದಲ್ಲಿ ನಮ್ಮನ್ನು ರಕ್ಷಿಸಿಕೊಳ್ಳದಂಥ ನಮ್ಮ ಸಾಮರ್ಥ್ಯವನ್ನು ಇದು ಸೂಚಿಸುವಂತದ್ದಾಗಿದೆ. ಈ ಅಂಟುಜಾಡ್ಯವು ಒಬ್ಬ ಪಾಪಿಯಿಂದ ಮತ್ತೊಬ್ಬನಿಗೆ ಕೆಟ್ಟದರ ಪ್ರಭಾವವು ಹರಡುತ್ತಾ ಹೋಗುತ್ತದೆ. ಅಸಹ್ಯ ಹುಟ್ಟಿಸುವಂತಹದನ್ನು ಹೊಂದಿಕೊಂಡಿರುವ ಇದು ಪಾಪವು ದೇವರ ದೃಷ್ಟಿಯಲ್ಲಿ ಎಷ್ಟು ತಿರಸ್ಕರಣೀಯವಾಗಿದೆ ಎಂಬುದನ್ನು ನಮಗೆ ನೆನಪಿಸುವಂತಹದ್ದಾಗಿದೆ. ಕುಷ್ಠದ ಪಿಡುಗಿಗೆ ಸಿಲುಕಿದವನನ್ನು ಡೇರೆಯಿಂದ ಹೊರಹಾಕುತ್ತಿದ್ದರು ಮತ್ತು ಆತನನ್ನು ಇಸ್ರಾಯೇಲ್ಯ ಜನರಿಂದ ಬೇರ್ಪಡಿಸುತ್ತಿದ್ದರು![2]

ಕುಷ್ಠವನ್ನು ಮನದಲ್ಲಿ ಇಟ್ಟುಕೊಂಡು ಯೆಶಾಯನು ಇಸ್ರಾಯೇಲ್ಯರ ಪಾಪಮಯತೆಯ ಬಗೆಗೆ ಹೀಗೆ ಬರೆದನು: "ಅಂಗಾಲಿನಿಂದ ನಡುನೆತ್ತಿಯತನಕ ಪೆಟ್ಟು ಬಾಸುಂಟೆ ಮಾಗದ ಗಾಯಗಳೇ ಹೊರತು ಏನೂ ಸೌಖ್ಯವಿಲ್ಲ" (ಯೆಶಾಯ 1:6).

ಕುಷ್ಠ ಮತ್ತು ಪಾಪ ಇವುಗಳ ಮಧ್ಯೆ ಭಿನ್ನತೆಗಳು ಬಹಳ ಇವೆ. ಕುಷ್ಠವು ಸ್ವಲ್ಪ ಸಂಖ್ಯೆಯ ಜನರಿಗೆ ಹತ್ತುವಂತಹದ್ದಾಗಿದೆ, ಪಾಪವು ಹತ್ತಿದಾಗ ಅವರು ತಮ್ಮ ಕಾರ್ಯಗಳಿಗೋಸ್ಕರ ಲೆಕ್ಕಕೊಡುವವರಾಗಿದ್ದಾರೆ (ರೋಮಾಪುರ 3:23). ತಿರುಗಿ, ಯಾರೋಬ್ಬನಿಗೆ ಕುಷ್ಠವು ಇರುವುದಾದರೆ, ಇದು ವೈಯಕ್ತಿಕವಾಗಿ ಮತ್ತು ಇತರರಿಗೆ ಬೇಗನೇ ಕಣ್ಣಿಗೆ ಕಾಣುತ್ತದೆ, ಇಂದು ಅನೇಕರು ಪಾಪಿಗಳಾಗಿದ್ದಾರೆ ಮತ್ತು ದೇವರ ಕೃಪೆಯ ಅವಶ್ಯಕತೆಯು ಅವರಿಗೆ ಇದೆ ಎಂಬುದರ ಅರಿವಿಲ್ಲದವರಾಗಿರುತ್ತಾರೆ.

ನೀವು ಇನ್ನೂ ದೇವರ ಕೃಪೆಯಡಿಯಲ್ಲಿ ನಿಮ್ಮನ್ನು ಒಳಪಡಿಸಿಕ್ಕೊಳ್ಳದೇ ಇದ್ದಿದ್ದಾದರೆ, ನಿಮ್ಮ ಆತ್ಮೀಕ ಸ್ಥಿತಿಗತಿಯನ್ನು ಪರಿಗಣಿಸಿರಿ. ಪೌಲನು ತನ್ನ ಜೀವಿತವನ್ನು ಈ ರೀತಿಯಲ್ಲಿ ಕ್ರಿಸ್ತನ ಮುಂದೆ ಚಿತ್ರಿಸಿದ್ದಾನೆ: "ನನ್ನಲ್ಲಿ ... ಒಳ್ಳೇಯದೇನೂ ವಾಸವಾಗಿಲ್ಲವೆಂದು ನನಗೆ ತಿಳಿದದೆ. ಒಳ್ಳೇಯದನ್ನು ಮಾಡುವುದಕ್ಕೆ ನನಗೇನೋ ಮನಸ್ಸುಂಟು ಆದರೆ ಅದನ್ನು ಮಾಡುವದು ನನ್ನಿಂದಾಗದು. ನಾನು ಮೆಚ್ಚುವ ಒಳ್ಳೆಯ ಕಾರ್ಯವನ್ನು ಮಾಡದೇ ಮೆಚ್ಚದಿರುವ ಕೆಟ್ಟ ಕಾರ್ಯವನ್ನೇ ಮಾಡುವವನಾಗಿದ್ದೇನೆ" (ರೋಮಾಪುರ 7:18, 19). ನಿಮ್ಮನ್ನು ನೀವು ಪೌಲನ ಮಾತುಗಳಲ್ಲಿ ಕಾಣುವವರಾಗಿದ್ದೀರೋ? ನೀವು ಒಳ್ಳೇಯದನ್ನು ಮಾಡಲು ಇಚ್ಛಿಸಿದಾಗ ನೀವು ಎಂದಾದರೂ ವಿಫಲವಾದದುದ್ದು ಇದೆಯಾ? ನೀವು ಮಾಡಿರುವ ಯಾವುದಾದರೂ ಕಾರ್ಯದಿಂದ ನಾಚಿಕೆಯಿಂದ ಕುಂದಿಹೋಗಿದ್ದು ಇದೆಯಾ? ಬೈಬಲ್ ಈ ಸಂಗತಿಗಳನ್ನು "ಪಾಪ' ಎಂದು ಕರೆಯುತ್ತದೆ ಮತ್ತು ಇಂಥವುಗಳು ನಿಮ್ಮ ಆತ್ಮವನ್ನು ನರಕಕ್ಕೆ ತಳ್ಳುವಂತವುಗಳಾಗಿರುತ್ತವೆ ಎಂದು ಬೈಬಲ್ ಘೋಷಿಸುವುದಾಗಿದೆ (ರೋಮಾಪುರ 6:23).

ನಾಮಾನನು ಅನೇಕ ಒಳ್ಳೇಯ ಗುಣಗಳನ್ನು ಹೊಂದಿದ್ದನು, ಆದರೆ ಒಂದು ದುರಂತ ಅಂಶದಲ್ಲಿರುವ ಅವುಗಳು ಚಿಕ್ಕವುಗಳಾಗಿ ಕಾಣುತ್ತಿದ್ದವು. "ಆದರೆ ಆತನು ಕುಷ್ಠರೋಗಿಯಾಗಿದ್ದನು." ನೀನೊಬ್ಬ ಎಲ್ಲರೂ ಮೆಚ್ಚುವಂತಹ ಗುಣಗಳುಳ್ಳ ಯೌವನಸ್ಥನಾಗಿರಬಹುದು ಸ್ತ್ರೀಯಾಗಿರಬಹುದು ಅಥವಾ ಪುರುಷನಾಗಿರಬಹುದು; ಆದರೆ ನಿನ್ನ ನಿತ್ಯತ್ವದ ಹಣೆ ಬರಹಕ್ಕನುಗುಣವಾಗಿ, ಈ ಒಂದು ಮರೆಮಾಡದಂತಹ ಸತ್ಯದಿಂದ ಈ ಎಲ್ಲಾ ಸಕಾರಾತ್ಮಕ ಗುಣಗಳು ಅಳಿದು ಹೋಗುತ್ತವೆ ಅದೇನೆಂದರೆ "ಆದರೆ ನೀನೊಬ್ಬ ಪಾಪಿಯಾಗಿದ್ದಿ." ಒಂದು ವೇಳೆ ನಾಮಾನನು ತನ್ನ ಸ್ಥಿತಿಯನ್ನು ತಿಳಿಯದೇ ಇದ್ದಿದ್ದಾದರೆ, ಆತನೆಂದಿಗೂ ಪ್ರವಾದಿಯನ್ನು ಹುಡುಕುವ ಪ್ರಯಾಣವನ್ನು ಕೈಕೊಳುತ್ತಿರಲಿಲ್ಲ. ಅಷ್ಟೇ ಅಲ್ಲದೇ, ನೀನು ನನ್ನನ್ನು ಪಾಪಿ ಮತ್ತು ಕಳೆದುಹೋದವ ಎಂದು ಒಪ್ಪಿಕೊಳ್ಳದೆ ಹೋದದ್ದಾದರೆ - ನಿನ್ನನ್ನು ರಕ್ಷಿಸಿಕೊಳ್ಳುವಲ್ಲಿ ಅಸಮರ್ಥನಾಗುವಿ - ಕರ್ತನೆಡೆಗೆ ರಕ್ಷಣೆಹೊಂದಲು ಎಂದಿಗೂ ತಿರುಗಿಕೊಳ್ಳಲಾರೆ.

## "ಸೂಚನೆ" (5:2-12:)

**ಶಿಫಾರಸು**

ವಚನ 2ರಲ್ಲಿ ಚಿಕ್ಕ ಇಬ್ರಿಯ ದಾಸಿಯು ನಮಗೆ ಪರಿಚಯಿಸಲ್ಪಡುತ್ತಾಳೆ: "ಅರಾಮ್ಯರು ಒಂದು ಸಾರಿ ಸುಲಿಗೆ ಮಾಡುವುದಕ್ಕೊಸ್ಕರ ಇಸ್ರಾಯೇಲ್ಯರ ಪ್ರಾಂತಕ್ಕೆ ಹೋಗಿಬರುವಾಗ ಅಲ್ಲಿನ ಒಬ್ಬ ಹುಡುಗಿಯನ್ನು ಹಿಡುಕೊಂಡು ಬಂದರು" (ವಚನ 2ಎ). ಒಂದು ಮಗುವಿನ ಶಕ್ತಿ ಮತ್ತು ಪ್ರಭಾವವನ್ನು ಎಂದಿಗೂ ಕಡೆಗಣಿಸದಿರಿ. ಅನೇಕ ಪಾಲಕರು, ತಮ್ಮ ಮಗುವಿನಿಂದ ಬರುವ "ಅಮ್ಮಾ ಚರ್ಚಿಗೆ ಹೋಗೋಣ ನಮ್ಮೊಡನೆ ಬಾ!"; "ಅಪ್ಪಾ ದಯಮಾಡಿ ಸಿಗರೇಟು

ಸೇದುವುದನ್ನು ನಿಲ್ಲಿಸು!" ಎಂಬ ಕೋರಿಕೆಗಳು ಅವರನ್ನು ಅಲುಗಾಡಿಸಿರಬಹುದು.

ಈ ಚಿಕ್ಕ ಯೆಹೂದಿ ಹುಡುಗಿಯು "ನಾಮಾನನ ಹೆಂಡತಿಗೆ ದಾಸಿಯಾದಳು" (ವಚನ 2ಬಿ). ಉದಾಸೀನವಾಗಿರಲು ಮತ್ತು ಅಸಂತುಷ್ಟಳಾಗಿರಲು, ತನ್ನ ಒಡೆಯನನ್ನು ದ್ವೇಷಿಸಲು ಮತ್ತು ತನ್ನ ನಂಬಿಕೆಯನ್ನು ಕಳೆದುಕೊಳ್ಳಲು ಅವಳಿಗೆ ಅನೇಕ ಕಾರಣಗಳಿದ್ದವು. ಅವುಗಳಲ್ಲಿ ಒಂದನ್ನೂ ಅವಳು ಮಾಡಲಿಲ್ಲ. ದ್ವೇಷದ ಮನೋಭಾವನೆಯನ್ನು ಇರಿಸಿಕೊಳ್ಳುವ ಬದಲು, ಅವಳ ಹೃದಯವು ನಾಮಾನನ ಬಗೆಗೆ ತುಂಬಿ ಹೊರಸೂಸಿತು (ನೋಡಿರಿ ರೋಮಾಪುರ 12:19-21). ಒಂದು ದಿನ ಅವನು ತನ್ನ ಒಡತಿಗೆ "ನಮ್ಮ ದಣಿಯು ಸಮಾರ್ಯದಲ್ಲಿರುವ ಪ್ರವಾದಿಯ ಹತ್ತಿರ ಇದ್ದರೆ ಎಷ್ಟೋ ಒಳ್ಳೇಯದಾಗುತ್ತಿತ್ತು! ಅವನು ಇವನನ್ನು ಕುಷ್ಠರೋಗದಿಂದ ವಾಸಿ ಮಾಡುತ್ತಿದ್ದನು" (2 ಅರಸು 5:3) ಎಂದು ಹೇಳಿದಳು. "... ಸಮಾರ್ಯದಲ್ಲಿರುವ ಪ್ರವಾದಿಯು" ಎಲೀಷನಾಗಿದ್ದನು. ದಾಸಿಯ ನಂಬಿಕೆಯು ದಕ್ಕೆಗೊಳಗಾಗದೇ ಉಳಿಯಿತು, ಮತ್ತು ಆಶಾಕಿರಣವೊಂದು ಇದೆ ಎಂದು ನಾಮಾನನು ತಿಳಿಯಬೇಕು ಎಂದು ಆಕೆಯು ಬಯಸಿದಳು!

ನೀನು ದೇವರೆಡೆಗೆ ತಿರುಗಿಕೊಳ್ಳದೇ ಹೋದದ್ದಾದರೆ, ನೀನು ಕಳೆದುಕೊಂಡಿದ್ದೀ ಎಂಬುದನ್ನು ಅರಿತುಕೊಳ್ಳುವದು ನಿನಗೆ ಮಹತ್ವದದ್ದಾಗಿದೆ; ಆದರೆ ಒಂದು *ನಿರೀಕ್ಷೆಯು* ಇದೆ ಎಂಬುದನ್ನು ನೀನು ತಿಳಿದುಕೊಳ್ಳುವದೂ ಸಹ ಮುಖ್ಯವಾದದ್ದಾಗಿದೆ. ಶುದ್ಧ ಪಡಿಸಿಕೊಳ್ಳುವಿಕೆಯು ನಮಗೆ ಲಭ್ಯವಿದೆ (ನೋಡಿರಿ ಯೋಹಾನ 15:3; ಎಫೆಸ 5:26) - ಅದು ಯೇಸುವಿನ ರಕ್ತದ ಮೂಲಕವೇ (ಪ್ರಕಟಣೆ 1:5; ನೋಡಿರಿ 1 ಯೋಹಾನ 1:7)! ಪೌಲನು ಹೀಗೆ ಬರೆಯುತ್ತಾನೆ,

> ನಮ್ಮ ಕರ್ತನಾದ ಯೇಸು ಕ್ರಿಸ್ತನ ದೇವರೂ, ತಂದೆಯೂ ಆಗಿರುವಾತನಿಗೆ ಸ್ತೋತ್ರ. ಆತನು ಪರಲೋಕದಲ್ಲಿನ ಸಕಲ ಆತ್ಮೀಯವರಗಳನ್ನು ನಮಗೆ ಕ್ರಿಸ್ತ ಯೇಸುವಿನಲ್ಲಿ ಅನುಗ್ರಹಿಸಿದ್ದಾನೆ ... ಈ ಕೃಪಾದಾನವು ಆತನ ಪ್ರಿಯನಲ್ಲಿಯೇ ನಮಗೆ ದೊರೆಯಿತು. ಈತನು ನಮಗೋಸ್ಕರ ತನ್ನ ರಕ್ತವನ್ನು ಸುರಿಸಿದ್ದರಿಂದ ನಮ್ಮ ಅಪರಾಧಗಳು ಪರಿಹಾರವಾಗಿ ನಮಗೆ ಬಿಡುಗಡೆಯಾಯಿತು (ಎಫೆಸ 1:3-7).

ಬಹುಶಃ ನೀನು ಮೊದಲನೇ ಸಾರಿ ಈ ಸತ್ಯವನ್ನು ಒಂದು ಮಗುವಿನಿಂದ ಕೇಳಿರಬಹುದು ಅಥವಾ ಸ್ನೇಹಿತನಿಂದ ಅಥವಾ ನೆರೆಯನನಿಂದ, ಅಥವಾ ನೀನು ಇದನ್ನು ಮೊದಲ ಸಾರಿಯೇ ಕೇಳುತ್ತಿರಬಹುದು. ಆಧಾರಗಳು ಏನೇ ಇರಲಿ ಅದನ್ನು ನಂಬು!

> ಏನ್ ಏನ್ ಪಾಪ ನೀಗ್ವದು?
> ಯೇಸುವಿನ ರಕ್ತ ಮಾತ್ರ;
> ಏನು ಸ್ವಸ್ಥ ಕೊಡ್ವದು?
> ಯೇಸುವನ ರಕ್ತ ಮಾತ್ರ.[3]

ನೀನು ಕರ್ತನ ಪ್ರೀತಿಯಲ್ಲಿ, ಬಂದದ್ದಾದರೆ, ವಿಧೇಯತೆಯಲ್ಲಿ ನಂಬಿಗಸ್ತನಾಗಿದ್ದಾದರೆ (ನೋಡಿರಿ ಗಲಾತ್ಯ 3:26, 27), ನಿನ್ನ ಪಾಪಗಳು ಅಮೂಲ್ಯ ರಕ್ತದಲ್ಲಿ "ತೊಳೆಯಲ್ಪಡುವವು" (ಅಪೊಸ್ತಲರ ಕೃತ್ಯಗಳು 22:16; ನೋಡಿರಿ ಮಾರ್ಕ 16:16; ಅಪೊಸ್ತಲರ ಕೃತ್ಯಗಳು 2:38)!

ನಾಮಾನನು ಚಿಕ್ಕ ದಾಸಿಯ ಮಾತುಗಳನ್ನು ತಿರುಗಿ ಹೇಳಿದನು ಮತ್ತು ಆತನು ತಿರುಗಿದನು, ಅರಸನ ಮುಂದೆ ಅವುಗಳನ್ನು ಪುನರುಚ್ಛರಿಸಿದನು (2 ಅರಸು 5:4). ವಾಸ್ತವಾಂಶವೆಂದರೆ ಚಿಕ್ಕ ಹುಡುಗಿಯ ವಿಶ್ಲೇಷಣೆಯನ್ನು ಗಂಭೀರವಾಗಿ ತೆಗೆದುಕೊಂಡಿದ್ದು

ಅವಳ ಗುಣದ ಬಗೆ ಹೆಚ್ಚಾಗಿ ಹೇಳುವಂತದ್ದಾಗಿದೆ. ಅವಳೇನೂ ತನ್ನ ಕುಟುಂಬದಿಂದ ಮತ್ತು ಜನರಿಂದ ಬೇರ್ಪಟ್ಟಿರಬಹುದು, ಆದರೆ ಅವಳು ಇನ್ನೂ ದೇವರ ಮಗುವಿನಂತೆ ವರ್ತಿಸುತ್ತಿದ್ದಾಳೆ. ಅವಳು ತನ್ನ ಸರಳತೆಯನ್ನು ಕಾಯ್ದುಕೊಂಡಳು!

**ಪ್ರತಿಕ್ರಿಯೆ**

ಸಿದ್ಧತೆಗಳು ತ್ವರೆಯಿಂದ ಮಾಡಲ್ಪಟ್ಟವು. ಬೇಗನೆ ನಾಮಾನನು ಇಸ್ರಾಯೇಲಿನ ಅರಸನಿಗೆ ಪತ್ರವನ್ನು ತೆಗೆದುಕೊಂಡು ನೂರಾರು ಪೌಂಡು ಅಮೂಲ್ಯ ವಸ್ತುಗಳೊಡನೆ, ದಮಸ್ಕದ ಒಳ್ಳೇಯ ಅಂಗಡಿಗಳಿಂದ ಒಳ್ಳೇಯ ಬಟ್ಟೆಗಳನ್ನು ತೆಗೆದುಕೊಂಡು ಹೊರಟನು (ವಚನ 5).

ನಾಮಾನನ ಪ್ರಯಾಣವು ಪ್ರಾರಂಭವಾಗುವದನ್ನು ನಾವು ಕಾಯುತ್ತಿದ್ದಂತೆಯೇ, ಜನರು ರಕ್ಷಣೆಯ ಬಗೆಗೆ ಮಾಡುವ ಸಹಜವಾದ ತಪ್ಪುಗಳನ್ನು ನಾನು ನೆನಪಿಸಿಕೊಂಡೆನು. ನಾಮಾನನು ದೇವರ *ಚಿತ್ತವನ್ನು ಮನವನ ರೀತಿಯಲ್ಲಿ ಮಾಡಲು ಪ್ರಯತ್ನಿಸಿದನು* ಇದು ಆತನ ಮೂಲ ತಪ್ಪಾಗಿತ್ತು. ಉದಾಹರಣೆಗಾಗಿ, ಆತನ ತನ್ನ ವಾಸಿಯಾಗುವಿಕೆಯನ್ನು ಕೊಂಡಿಕೊಳ್ಳಬಹುದು ಎಂದುಕೊಂಡಿದ್ದನು. ಅನೇಕರು ಇಂದು ಒಳ್ಳೇಯ ಕಾರ್ಯಗಳನ್ನು ಮಾಡುವ ಮೂಲಕ ರಕ್ಷಣೆಯನ್ನು "ಕೊಳ್ಳಬಹುದು" ಅಥವಾ "ಸಂಪಾದಿಸಬಹುದು" ಎಂದು ಕೊಂಡಿರುತ್ತಾರೆ - ಆದರೆ ಯಾರೊಬ್ಬನೂ ತನ್ನ ರಕ್ಷಣೆಯ ಅರ್ಹತೆಗಾಗಿ ಸಾಕಷ್ಟು ಒಳ್ಳೇಯವನಾಗಿರಲಾರ ಅಥವಾ ಸಾಕಷ್ಟು ಒಳ್ಳೆಯದನ್ನು ಮಾಡಲಾರನು (ನೋಡಿರಿ ಎಫೆಸ 2:8, 9; ಪ್ರಕಟಣೆ 22:17). ಮುಂದೆ, ನಾಮಾನನು ಪ್ರವಾದಿಯನ್ನು ಭೇಟಿಯಾಗುವ ಬದಲು ಅರಸನನ್ನು ಭೇಟಿಯಾಗುತ್ತಾನೆ. ಹೀಗೆ ಆತನು ತಪ್ಪಾದ ವ್ಯಕ್ತಿಯನ್ನು ಭೇಟಿಯಾಗುತ್ತಾನೆ (ನೋಡಿರಿ 2 ಅರಸು 5:6). ಅದರಂತೆ, ಅನೇಕರು ದೇವರ ಸತ್ಯವಾದ ಮಾರ್ಗದ ಬದಲಾಗಿ ಜನರು ದೋಷಮಯ ಸಂಪ್ರದಾಯಗಳಾದ ತಪ್ಪಾದ ಧಾರ್ಮಿಕ ಮುಖಂಡರತ್ತ ಹೋಗುತ್ತಾರೆ (ನೋಡಿರಿ ಮತ್ತಾಯ 15:1-9).

ನಾಮಾನ ಮತ್ತು ಆತನ ಸಹಚರರು ಸಮಾರ್ಯವನ್ನು ತಲುಪಿದೊಡನೆ, ಅರಾಮ್ಯ ಅರಸನಿಂದ ತರಲ್ಪಟ್ಟ ಪತ್ರವು ಇಸ್ರಾಯೇಲಿನ ಅರಸನ ಕೈಗೆ ಕೊಡಲಾಯಿತು. ಅದರಲ್ಲಿ ಸಂದೇಶವು ಹೀಗಿತ್ತು: "ನನ್ನ ಸೇವಕನಾದ ನಾಮಾನನನ್ನು ನಿನ್ನ ಬಳಿಗೆ ಕಳುಹಿಸಿದ್ದೇನೆ: ನೀನು ಅವನ ಕುಷ್ಠರೋಗವನ್ನು ವಾಸಿಮಾಡತಕ್ಕದೆಂದು ಈ ಪತ್ರದಿಂದ ತಿಳಿದು ಕೋ" (2 ಅರಸು 5:6). ಇಸ್ರಾಯೇಲ್ ಅರಸನು ಈ ಪತ್ರವನ್ನು ಓದಿದ ಕೂಲೇ ಬಟ್ಟೆಗಳನ್ನು ಹರಿದುಕೊಂಡು "ತನ್ನ ಪರಿವಾರದವರಿಗೆ ತಾನು ಕಳುಹಿಸಿದ ಮನುಷ್ಯನನ್ನು ಕುಷ್ಠರೋಗದಿಂದ ವಾಸಿಮಾಡಬೇಕೆಂತೆ; ಇದೆಂಥ ಅಪ್ಪಣೆ! ನಾನೇನು ದೇವರೋ? ಜೀವದಾನ ಮಾಡುವುದಕ್ಕಾಗಲಿ, ಸಾಯಿಸುವುದಾಕ್ಕಾಗಲಿ ನನಗೆ ಸಾಮರ್ಥ್ಯವುಂಟೋ?" (ವಚನ 7ಎ) ಎಂದು ಕೇಳಿದನು. ಎಲ್ಲಾ ಅರಸರು ದೂರದ ದೃಷ್ಟಿಯನ್ನು ಇಟ್ಟು ಕೊಂಡು ನೋಡುವವರಾಗಿರುತ್ತಾರೆ; ಅರಾಮ್ಯರ ಅರಸನು ಯುದ್ಧಕ್ಕಾಗಿ ನೆವವನ್ನು ಹುಡುಕುವವನಾಗಿದ್ದಾನೆ ಎಂದು ಆತನು ಯೋಚಿಸುವವನಾಗಿದ್ದನು: "ಇವನು ನನ್ನೊಡನೆ ಜಗಳವಾಡುವುದಕ್ಕೆ ಕಾರಣವನ್ನು ಹುಡುಕುತ್ತಾನಲ್ಲದೇ ಮತ್ತೇನು? ನೀವೇ ಆಲೋಚಿಸಿ ನೋಡಿರಿ ಎಂದು ಹೇಳಿದನು" (ವಚನ 7ಬಿ).

ಇಲ್ಲಿ ಏನೂ *ಸಂಭವಿಸಬಹುದಿತ್ತು*: ಅರಸನು ನಕ್ಕು ಹೇಗೆ ಹೇಳಬಹುದಿತ್ತು: "ಈ ಹೊಗಳಿಕೆಗೆ ನಿನಗೆ ವಂದನೆಗಳು, ಆದರೆ ನಿನಗೆ ಸಹಾಯ ಮಾಡುವ ಶಕ್ತನು ನಾನಲ್ಲ. ನೀನು, ಈ ಪಟ್ಟಣದ ಅಂಚಿನಲ್ಲಿನ ಚಿಕ್ಕ ಮನೆಯಲ್ಲಿರುವ ವಾಸವಾಗಿರುವ, ಪ್ರವಾದಿಯಾದ ಎಲೀಷನೆಡೆಗೆ ಹೋಗಬೇಕು." ಈ ಪುರಾವೆಗಳ ಸಾಧ್ಯತೆಯು ಆತನಲ್ಲಿ ಕಾಣಿಸಲೇ ಇಲ್ಲ. ಆ ಚಿಕ್ಕ ಇಬ್ರಿಯ ದಾಸಿಯು ದೇವರ ಪ್ರವಾದಿಯ ಬಗೆಗೆ ಯೋಚಿಸಿದಳು, ಆದರೆ ದೇವ ಜನರ

ಮೇಲಿರುವ ಅರಸನಿಗೆ ಅದು ಗೊತ್ತಾಗಲಿಲ್ಲ.

**ಪರಿಹಾರ**

ಅರಸನ ಪೇಚಾಟವು ಎಲೀಷನನ್ನು ಮುಟ್ಟಿತು ಮತ್ತು ಪ್ರವಾದಿಯೆಡೆಗೆ ನಾಮಾನನು ಕಳುಹಿಸಲ್ಪಟ್ಟನು (ವಚನ 8). "ನಾಮಾನನು ರಥಾರಥಾಶ್ವಗಳೊಡನೆ ಎಲೀಷನ ಮನೆಯ ಮುಂದೆ ಹೋಗಿ ನಿಂತನು" (ವಚನ 9). ಕುದುರೆಗಳ ಖರಪಟಗಳ ಸದ್ದನ್ನು, ರಥಗಳ ಗಿಲಿಕೆಯ ಸದ್ದನ್ನೂ, ಚರ್ಮದ ಕಿರುಗುಟ್ಟುವಿಕೆಯು, ನಪ್ರುವಾದ ಪ್ರವಾದಿಯು ವಾಸಿಸುವ ಸ್ಥಳ ತಲುಪಿದ ಪರಿವಾರದವರ ಗುಜುಗುಜು ಸದ್ದನ್ನು ನೀವು ಎಂದಾದರೂ ಕೇಳಿದ್ದೀರಾ? ನಾಮಾನನು, ತನ್ನ ಹೊಳೆಯುವ ಬಟ್ಟೆಗಳಲ್ಲಿ, ತನ್ನ ಅದು ಅದ್ಭುತವಾದ ನಿಲುವಂಗಿಯಲ್ಲ, ಮತ್ತು ಲೋಹದ ಮತ್ತು ಚರ್ಮದ ಕವಚ ಮತ್ತು ಶಿರಸ್ತ್ರಾಣದೊಂದಿಗೆ ರಥದಲ್ಲಿ ಗರ್ವದಿಂದ ಕುಳಿತಿರುವುದನ್ನೂ, ಪ್ರವಾದಿಯು ತನ್ನನ್ನು ತನ್ನ ಈಗಿರುವ ವ್ಯಕಿತತ್ವವನ್ನು ಅರಿಯಲೆಂದು ಕಾಯುತ್ತಾ ಕುಳಿತಿರುವುದನ್ನೂ ನೀವು ನೋಡಿದ್ದೀರಾ?

ಎಲೀಷನು ತನ್ನ ಮನೆಯಿಂದ ಹೊರಗೆ ಬರಲಿಲ್ಲ. ಬಹುಶಃ ನಾಮಾನನು ತನ್ನ ತಲುಪುವಿಕೆಯನ್ನು ತುತ್ತೂರಿಯನ್ನು ಊದಿಸಿ ತಿಳಿಸಿರಬಹುದು. ಇನ್ನೂ ಏನೂ ಇಲ್ಲ. ಅಂತಿಮವಾಗಿ ಬಾಗಿಲು ತೆರೆಯಿತು ಮತ್ತು ಒಬ್ಬ ಮನುಷ್ಯನು ಹೊರಗೆ ಬಂದನು ಆತನು ನಿಶ್ಚಿತವಾಗಿಯೂ ಸೇವಕನು ಆಗಿದ್ದನು (ವಚನ 10ಎ). ನಾನು ಆತನನ್ನು ಅಡ್ಡಾದಿಡ್ಡಿಯಾಗಿ ಬೆಳೆದ ಗಡ್ಡ, ಜರ್ಜರಿತವಾದ ಮತ್ತು ತೇಪೆಯ ನಿಲುವಂಗಿಯನ್ನು ಧರಿಸಿದ್ದನು ಎಂದು ಹೀಗೆ ಚಿತ್ರಿಸುತ್ತೇನೆ. ಆ ದೂತನು ನಾಮಾನನಿಗೆ: "ಹೋಗಿ ಯೋರ್ದನ ಹೊಳೆಯಲ್ಲಿ ಏಳು ಸಾರಿ ಸ್ನಾನಮಾಡು; ಆಗ ನಿನ್ನ ದೇಹವು ಮುಂಚಿನಂತಾಗುವದು" (ವಚನ 10ಬಿ) ಎಂದು ಹೇಳಿದನು.

ಎಲೀಷನು ತಾನೇ ಏಕೆ ಹೊರಬರಲಿಲ್ಲ? ಬಹುಶಃ ಆತನು ಇತರೆ ಕಾರ್ಯಗಳಲ್ಲಿ ವ್ಯಸ್ಥನಾಗಿರಬಹುದು, ಆದರೆ ನಾನು ನೆನಿಸುತ್ತೇನೆ ನಾಮಾನನ ಕುಷ್ಠವು ವಾಸಿಯಾಗುವಂತೆಯೇ, ಆತನ ಗರ್ವವೂ ವಾಸಿಯಾಗಲಿ ಎಂದು ಆತನು ಬಯಸಿರಬಹುದು. ದೇವರು ದ್ವೇಷಿಸುವ ಸಂಗತಿಗಳಲ್ಲಿ ಮೊದಲನೆಯದು ಗರ್ವವೇ ಆಗಿದೆ (ಜ್ಞಾನೋಕ್ತಿ 6:16-19; KJV ನೋಡಿರಿ).

**ಪ್ರತಿಕ್ರಿಯೆ**

ಈ ಸರಳವಾದ ಸೂಚನೆಯನ್ನು ಕೇಳಿದ ನಾಮಾನನು ಸಂತೋಷದಿಂದ ತುಂಬಿದವನಾದನೇ? ಇಲ್ಲ, ಆತನು "ಕೋಪಗೊಂಡನು" (2 ಅರಸು 5:11ಎ). NIVಯಲ್ಲಿ ಆತನು ಸಿಟ್ಟಿಗೆದ್ದನು ಎಂದಿದೆ CEVಯಲ್ಲಿ ಆತನು ರೌದ್ರವುಳ್ಳವನಾದನು, ಗುಣಗುಟ್ಟಿದನು ಎಂದಿದೆ. ಬಾಲಕನಾಗಿದ್ದಾಗ ನಾನು ಓಕ್ಲಾಹಾಮದಲ್ಲಿರುವಾಗ, ನಾವು ಹೀಗೆ ಹೇಳುತ್ತಿದ್ದೆವು ನಾಮಾನನು "ತೋರಿಕೆಯ ಸಿಟ್ಟನ್ನು ಹೊಂದಿದವನಾಗಿದ್ದ" ಎಂದು. ಬಹುಶಃ ಆತನ ಪ್ರತಿಕ್ರಿಯೆಯನ್ನು ವಿವರಿಸುವ ಪದವನ್ನು ನೀವು ಹೊಂದಿದ್ದೀರಿ. ನಾಮಾನನು ಎಲ್ಲಾ ಸಂಗತಿಗಳನ್ನು ಮರೆತು ಮನೆಗೆ ಹೋಗಲು ಸಿದ್ಧನಾಗಿದ್ದನು (ವಚನ 11ಬಿ). ಆತನು ತನ್ನ ಹುಳುಕು ಹೊಂದಿದ ದೇಹದೊಂದಿಗೆ ಅರಾಮ್ಯದಿಂದ ಹೊರಟಿದ್ದನು, ಮತ್ತು ಆತನು ಅದೇ ದೇಹದೊಂದಿಗೆ ಮರಳುತ್ತಿದ್ದಾನೆ, ಎಂಥಹ ದುರಂತ!

ನಾಮಾನನು, "ಇದೇನು! ಅವನು ಹೇಗೋ, ಹೊರಗೆ ಬಂದು ನಿಂತು ತನ್ನ ದೇವರಾದ ಯೆಹೋವನ ಹೆಸರು ಹೇಳಿ ಕುಷ್ಠದ ಮೇಲೆ ಕೈಯಾಡಿಸುವನು ಎಂದು ನೆನಸಿದೆನು" (ವಚನ 11ಸಿ). ಎಲೀಷನು ಏನು ಮಾಡಬಹುದು ಎಂಬುದನ್ನು ಸರಿಯಾಗಿ ಆತನ ಮನಸ್ಸು ಯೋಚಿಸಿತ್ತು: ಪ್ರವಾದಿಯು ಅರಾಮ್ಯದ ಸುಳ್ಳು ಪ್ರವಾದಿಗಳು ಮಾಡುವಂತೆ ಈತನೂ ಕೂಡಾ

ಅಸ್ಪಷ್ಟವಾಗಿ ಮಾತಾಡುತ್ತಾ ಮೋಡಿ ಮಾಡುವನು ತನ್ನ ಕೈಯನ್ನು ಗೂಢವಾಗಿ ಬೀಸುವನು ಎಂದು ಕೊಂಡನು. ನಾಮಾನನು ಇನ್ನೂ ದೇವರ "ಮಾನವನ ಮಾರ್ಗದಲ್ಲಿ ದೇವರ ಚಿತ್ತವನ್ನು ಮಾಡುವದು" ಎಂಬುದರಲ್ಲಿ ಇದ್ದಾನೆ.

"ಇದೇನು! ನಾನು ... ಯೋಚಿಸಿದ್ದೆ" ಎಂಬವುಗಳು ವ್ಯಕ್ತಿಯನ್ನು ತೊಂದರೆಯಲ್ಲಿ ಸಿಲುಕಿಸುವಂತಹದ್ದಾಗಿದೆ. ನಾನು ಬಾಲಕನಾಗಿದ್ದಾಗ, ನಾನು ಕೆಲ ಪಟಾಕಿಗಳನ್ನು ಕೊಂಡುಕೊಂಡಿದ್ದೆನು. ಒಂದು ಪಟಾಕಿಯ ಕೊನೆಯವರೆಗೂ ತಿರುಗುವ ಚಕ್ರವಾಗಿತ್ತು. "ಇದೇನು ನಾನು ಯೋಚಿಸಿದ್ದೆ" ಈ ಪಟಾಕಿಯ ನೂಲಬಹುದು ಮತ್ತು ಮುಂದಕ್ಕೆ ಹೋಗುವ ಸಾಧನವಾಗಬಹುದು ಎಂದು. ನಾನು ಪಟಾಕಿಗಳನ್ನು ಚಕ್ರದ ಜೊತೆಗೆ ಮರದ ಕೆಳಗೆ ಇಟ್ಟೆನು ಬಯಲನ್ನು ಪ್ರದೇಶದ ಕಡೆಗೆ ಮುಖಮಾಡಿ ಹಾರಿಸಿದೆನು: "ಅದು ಮುಂದಕ್ಕೆ ಹೋಗುವ ಬದಲಾಗಿ, ಪಟಾಕಿಗಳು ನೇರವಾಗಿ ಮೇಲಕ್ಕೆ ಹೋದವು, ಮರದ ರೆಂಬೆಗೆ ಹೊಡೆದು ತಿರುಗಿ ಕೆಳಗೆ ಬಂದವು, ನೆಲಕ್ಕೆ ಹೊಡೆದವು ಮತ್ತು ಹಾಗೆ ಹಾರುವಾಗ ನನ್ನ ಕಾಲುಗಳ ಮಧ್ಯೆ ಮಿಂಚಿದವು. ಇದೇನು! ನಾನು ... ಯೋಚಿಸಿದ್ದೆ" ಎಂಬುದರ ಪರಿಣಾಮವು ನನ್ನ ಜೀನ್ಸನಲ್ಲಿ ಎರಡು ತೂತುಗಳಾದವು ಮತ್ತು ಸುಟ್ಟ ಗಾಯದ ಕಲೆಯು ಇನ್ನೂ ನನ್ನ ಮೇಲಿದೆ.

ಸಮಾಲೋಚಕರು ನಾಮಾನನ ವಿಚಾರವನ್ನು ಒಬ್ಬ ವ್ಯಕ್ತಿಯು ತನ್ನಷ್ಟಕ್ಕೆ ತಾನೇ ಮಾತಾಡಿಕೊಳ್ಳುವಂತಹ ಮಾತು "ಸ್ವಗತ" ಎನ್ನುತ್ತಾರೆ: ಒಂದು ವೇಳೆ ನಿಮ್ಮ "ಸ್ವಗತವು" ತಪ್ಪು ಮಾಹಿತಿಕೊಡುವುದಾಗಿದ್ದರೆ ಮತ್ತು ಸರಿಯಾದದ್ದು ಆಗಿಲ್ಲದಿದ್ದರೆ, ಅದು ದೊಡ್ಡ ಅಪಾಯವನ್ನು ತರುವಂತಹದ್ದಾಗಿದೆ. ಅಸಂತುಷ್ಟಿಗಳನ್ನು ನಾನು ಮಾತನಾಡಿಸಿದಾಗ ಅವರು ಹೀಗೆ ಹೇಳಿದರು, "ನಾನು ಯೋಚಿಸಿದ್ದೆ ನಾನು ಮದುವೆಯಾದ ಕೂಡಲೇ ಅದು [ಇದರಂತೆ ಅದರಂತೆ] ಇರುತ್ತದೆ ಎಂದು." ಈಗ ನನಗೆ ಸಮಾಧಾನವಾಯಿತು. ಇತರೆ ಅಸಂತುಷ್ಟ ಜನರು ಹೀಗೆ ಹೇಳಬಹುದು. "ನಾನು ಯೋಚಿಸಿದ್ದೆ ನನಗೆ ಈ ಕೆಲಸ ಸಿಕ್ಕರೆ ... ಅಥವಾ ನನಗೆ ಈ ಮಗುವಾದರೆ ... ಅಥವಾ ನಾನು ಬೋಧಿಸುವುದನ್ನು ಪ್ರಾರಂಭಿಸಿದ ಕೂಡಲೇ ... ಅದು ತುಂಬಾ ವಿಭಿನ್ನವಾಗಿರುತ್ತದೆ ಎಂದು." ದೊಡ್ಡ ದುರಂತವೆಂದರೆ ಜನರು ಧಾರ್ಮಿಕವಾದ "ಸ್ವಗತದಲ್ಲಿ" ತೊಡಗಿಸಲ್ಪಟ್ಟಾಗ ಅವರು: "ಹೌದು, ಬೈಬಲ್ ಹೀಗೆ ಹೇಳುತ್ತದೆ [ಅದು ಅದು] ಎಂಬುದನ್ನು ನಾನು ಬಲ್ಲೆನು - *ಆದರೆ ನಾನು ಯೋಚಿಸುವುದೇನೆಂದರೆ,* ನನ್ನ ಪಾಲಕರು ಅಥವಾ ನನ್ನ ಬೋಧಕರು ಏನನ್ನು ಕಲಿಸುತ್ತಾರೋ ಅದರಲ್ಲಿ ಇರಬಯಸುತ್ತೇನೆ" ಎನ್ನುವುದುಂಟು. ಡೋನಾಲ್ಡ್ ಬಾರ್ನಹೌಸ್‌ವರು ಹೇಳುವೆದೇನೆಂದರೆ "ಪ್ರತಿಯೊಬ್ಬನಿಗೂ ದೇವರ ಮಾರ್ಗದ ಮೂಲಕ ಪರಲೋಕಕ್ಕೆ ಹೋಗಲು ಅಥವಾ ತಮ್ಮದೇ ಆದ ಮಾರ್ಗದಲ್ಲಿ ನರಕಕ್ಕೆ ಹೋಗಲು ಅವಕಾಶಗಳಿವೆ."[4]

ನಾಮಾನನು ನಾಟಕೀಯವಾಗಿ ಮಾತಾಡತೊಡಗಿದನು "ದಮಸ್ಕದ ಅಬಾನಾ ಪರ್ಪರ್ ಎಂಬ ಹೊಳೆಗಳು ಇಸ್ರಾಯೇಲ್ಯರ ಎಲ್ಲಾ ಹೊಳೆ ಹಳ್ಳಗಳಿಗಿಂತ ಉತ್ತಮವಾಗಿದೆಯಲ್ಲವೋ? ಸ್ನಾನದಿಂದ ವಾಸಿಯಾಗುವ ಹಾಗಿದ್ದರೆ ನಾನು ಅವುಗಳಲ್ಲಿಯೇ ಸ್ನಾನಮಾಡಬಹುದಲ್ಲವೇ" (ವಚನ 12ಎ). ಜಗತ್ತಿನ ಆ ಭಾಗದ ನದಿಗಳನ್ನು ನೋಡಿದವರು ಇವು ದಮಸ್ಕದ "ಬಂಗಾರದ ಹಳ್ಳಗಳು"[5] ಆದ ಇವುಗಳು ರಾಡಿಯ ಯೊರ್ದನ್ ನದಿಗಿಂತ ಎಷ್ಟೋ ಯೋಗ್ಯವಾಗಿವೆ ಎಂಬುದನ್ನು ಒಪ್ಪುವವರಾಗಿರುತ್ತಾರೆ. ನಾಮಾನನು ತನ್ನ ಪರೀಕ್ಷೆಗೆ ಒಳಪಡಿಸುವ ಮತ್ತು ತನ್ನ ಗರ್ವವನ್ನು ತೊಡೆದು ಹಾಕುವ ಬದಲಾಗಿ ಆ ಸಂದರ್ಭವನ್ನು ಹೊಳೆಗಳ ತುಲನೆಯ ಮಾಡುವುದಕ್ಕೆ ಪ್ರಯತ್ನಿಸಿದನು.

ನಾಮಾನನಿಂದ ಮಾಡಲ್ಪಟ್ಟ ತಪ್ಪು ವರ್ಷದುದ್ದಕ್ಕೂ ಧಾರ್ಮಿಕ ವೃತ್ತಗಳಲ್ಲಿ ಪುನರಾವರ್ತಿತವಾಗುತ್ತಾ ಇದೆ. ಅವುಗಳು ಖಚಿತವಾಗಿಯೂ ಮಗುವು ದೊಡ್ಡವನಾದ ಮೇಲೆ ವೈಯಕ್ತಿಕವಾಗಿ ಕರ್ತನನ್ನು ತಿರಸ್ಕರಿಸುವುದಕ್ಕೆ ಅವಕಾಶ ಕೊಡುವುದಕ್ಕಿಂತಲೂ "ಮಗುವಿರುವಾ

ಗಲೇ ದೀಕ್ಷಾಸ್ನಾನ ಕೊಡುವದು" ಒಳ್ಳೇಯದು: "ದೀಕ್ಷಾಸ್ನಾನದ ಸಮಯದಲ್ಲಿ ಜನರನ್ನು ನೀರಲ್ಲಿ ಮುಣುಗಿಸಿ ಸಂಪೂರ್ಣವಾಗಿ ಒದ್ದೆ ಮಾಡುವುದಕ್ಕಿಂತ ಕೆಲಹನಿ ನೀರನ್ನು ಬಳಸುವದು ಒಳ್ಳೇಯದಲ್ಲವೇ." ನಾಮಾನ ಮತ್ತು ಆತನ ಹಾಗೆ ತಪ್ಪನ್ನು ಪುನರಾವರ್ತನೆ ಮಾಡುವವರಿಗೆ ನನ್ನ ಪ್ರತಿಕ್ರಿಯೆ ಸರಳವಾದುದ್ದು: ದೇವರು ಆಜ್ಞಾಪಿಸಿದಂತೆ ಒಳ್ಳೇಯದು ಯಾವುದೂ ಇಲ್ಲ, ಆತನು ಹೇಳಿದಂತೆಯೇ ಅದನ್ನು ಮಾಡು (ಮತ್ತಾಯ 7:21; ಲೂಕ 6:46; ನೋಡಿರಿ ಯೆಶಾಯ 55:8, 9)!

"ನಾಮಾನನು ಬಲುಸಿಟ್ಟಿನಿಂದ ಹೊರಟುಹೋದನು" (ವಚನ 12ಬಿ). ಎಲೀಷನು ಹೊರಗೆ ಬಂದು ಆತನ ಮಹತ್ತನ್ನು ಗುರುತಿಸುವಲ್ಲಿ ವಿಫಲನಾಗಿದ್ದರಿಂದ ಬಹುಶಃ ಆತನು ಅವಮಾನಕ್ಕೆ ಗುರಿಯಾದನು. ಆತನಂತಹ ದೃಷ್ಟಾಂತಿಕವಾದ ಶ್ರೇಷ್ಟ ವ್ಯಕ್ತಿಯೊಬ್ಬನು ಕೊಳೆಯಾದ ನೀರಲ್ಲಿ ಮುಳುಗುವ ಸಲಹೆಯಿಂದ ಅವಮಾನಕ್ಕೀಡಾದಂತೆ ನೆನಿಸಿದನು. ಆತನು ವೈದ್ಯರೆಡೆಗೆ ಹೋದನು ಆದರೆ ಅವರ "ವೈದ್ಯಕೀಯ ಸಲಹೆಗಳು" ಆತನಿಗೆ ಮೆಚ್ಚಿಕೆಯಾಗಲಿಲ್ಲ - ಆದ್ದರಿಂದ ಆತನು ಸಿಟ್ಟುಗೊಂಡನು. ಹೇಗೋ, ಆತನ ಸಿಟ್ಟು ಆತನ ನೈಜತ್ವವನ್ನು ಬದಲಾಯಿಸುವುದಿಲ್ಲ; ಆತನು ಇನ್ನೂ "ಜೀವಶ್ವವದಂತೆ"[6] ಸೊಂಕಿತನಾಗಿಯೇ ಇದ್ದಾನೆ. ನಾನು ಸ್ನಾನದ ಕೋಣೆಯ ಅಳತೆಯಿಂದ ಕೋಪ ಗೊಳ್ಳಬಹುದು, ಆದರೆ ಅದು ನನ್ನ ತೂಕದ ಸಮಸ್ಯೆಯನ್ನು ಬಗೆಹರಿಸಲಾರದು. ವಾಯುಭಾರಮಾಪಕದ ಮೇಲೆ ಕೋಪ ಗೊಳ್ಳುವದು ಬಿರುಗಾಳಿಯನ್ನು ನಿಲ್ಲಿಸಬಾರದು. ಬಲು ಮಹತ್ವವಾದದ್ದೆಂದರೆ ಸುವಾರ್ತಾ ಬೋಧಕನ ಮೇಲೆ ಕೋಪಗೊಳ್ಳುವದು ಖಂಡಿತವಾಗಿ ನೀನು ಪಾಪಿ ಯೇಸುವಿನಲ್ಲಿ ವಿಶ್ವಾಸವಿಡುವದು ಅವಶ್ಯ ಎಂಬ ನಿಜಾಂಶವನ್ನು ಬದಲಾಯಿಸದು.

## ವಾಸಿಯಾಗುವಿಕೆ (5:13-17)

**ದೇವರ ಶಕ್ತಿಯಿಂದ ಶುದ್ಧವಾಗುವಿಕೆ!**

ಆಗ ನಾಮಾನನ ಪರಿವಾರದವರು ಯಾತ್ರೆಯನ್ನು ಮುಂದುವರೆಸಿದಂತೆ ಅನಾಹುತವನ್ನು ಮುಂದಿಟ್ಟು ಕೊಂಡರು "ಆಗ ಅವನ ಸೇವಕರು ಹತ್ತಿರ ಬಂದರು" (2 ಅರಸು 5:13) ಅವನೊಡನೆ ಮಾತನಾಡಿದರು. ಅವರು "ಅಪ್ಪನವರೇ, ಪ್ರವಾದಿಯು ಒಂದು ಕಠಿಣವಾದ ಕೆಲಸವನ್ನು ಹೇಳಿದ್ದರೆ ಅದನ್ನು ಮಾಡುತ್ತಿದ್ದಿರಲ್ಲಾ; ಹಾಗಾದರೆ ಸ್ನಾನಮಾಡಿ ಶುದ್ಧನಾಗು ಎಂದು ಹೇಳಿದರೆ ಯಾಕೆ ಅದರಂತೆ ಮಾಡಬಾರದು ಅಂದರು" (ವಚನ 13ಬಿ). ಆತನ ಸೇವಕರು ಮಾತನಾಡುವ ನಿಜಾಂಶವು ಅವರು ತಮ್ಮ ಒಡೆಯನ ಬಗೆಗೆ ಕಾಳಜಿಯುಳ್ಳವರಾಗಿದ್ದರು ಎಂದು ಅವರ ಬಗೆಗೆ ನಮಗೆ ಹೇಳುವುದಾಗಿದೆ. ಮತ್ತು ಅವರ ಸಂಬಂಧದ ಬಗೆಗೆ ಮತ್ತು ನಾಮಾನ ಮತ್ತು ನಾಮಾನನು ತನ್ನ ಬಗೆಗೆ ಇರಿಸಿಕೊಂಡ ಸಂಬಂಧದ ಬಗೆಗೆ ಸಹಿತ ಹೇಳುವಂತಹದ್ದಾಗಿದೆ. ಅನೇಕ ಒಡೆಯರು ಈ ರೀತಿಯ "ಮಧ್ಯಪ್ರವೇಶಿಸುವಿಕೆಯಿಂದ" ಅಸಂತುಷ್ಟಿಗಳಾಗುತ್ತಾರೆ. ಮತ್ತು ಈ ರೀತಿಯ "ಉದ್ಧಟತನ" ದಿಂದ ಮಾತನಾಡಿದಕ್ಕಾಗಿ ಅವರನ್ನು ಶಿಕ್ಷೆಗೆ ಗುರಿಮಾಡುತ್ತಿದ್ದರು. ಹೇಗೋ, ಈ ಸೇವಕರು ನಾಮಾನನೊಡನೆ ಸ್ವತಂತ್ರ್ಯವಾಗಿ ಮಾತನಾಡುತ್ತಿದ್ದರು ಮತ್ತು ಆತನು ಅದನ್ನು ಕೇಳುವುದಕ್ಕೆ ಸಿದ್ಧನಾಗಿದ್ದಾನೆ.

ಇದಕ್ಕೆ ಸರಿಯಾಗಿ ಅವರು, "ಪ್ರವಾದಿಯು ಕೈಯಿಂದ ಕೈಗೆ ದ್ವಂದಯುದ್ಧದಲ್ಲಿ ನಿಮ್ಮ ಬಲವಾದ ಎದುರಾಳಿಯೊಂದಿಗೆ ಅಥವಾ ಕ್ರೂರ ಮೃಗದೊಂದಿಗೆ ಹೋರಾಡು ಎಂದಿದ್ದರೆ ನೀವು ಆ ಕಾರ್ಯದಲ್ಲಿ ತೊಡಗುತ್ತಿದ್ದಿರಲ್ಲವೇ? ಆತನು ತನ್ನ ದೇವರಿಗಾಗಿ ಬಂಗಾರದ ಪ್ರತಿಮೆಯನ್ನು ನಿಲ್ಲಿಸಲು ಹೇಳಿದ್ದರೆ ಮಾಡುತ್ತಿರಲಿಲ್ಲವೇ? ಶಾಪದಿಂದ ನಿಮ್ಮನ್ನು ಕದಲಿಸಲೆಂದು ನೀವು ಏನಾದರೂ ಮಾಡಲು ಸಿದ್ಧನಾಗಿರುತ್ತಿದ್ದೀರಲ್ಲವೇ? ಹಾಗಾದರೆ ಈ ಸರಳವಾದ ಕೆಲಸವನ್ನು ಯಾಕೆ ಮಾಡಬಾರದು?"

ಯಾರಾದರೂ ಪಾಪದ ದೋಷದಿಂದ ತಮ್ಮನ್ನು ತಾವು ಮುಕ್ತವಾಗಿಸಿಕೊಳ್ಳಲು ಏನನ್ನಾದರೂ ಮತ್ತು ಪ್ರತಿಯೊಂದನ್ನೂ ಮಾಡಲು ಒಪ್ಪಿಕೊಳ್ಳುವದು ಮತ್ತು ದೇವರ ಆಜ್ಞೆಗೆ ವಿಧೇಯರಾಗುವ ಸರಳವಾದುದ್ದನ್ನು ಬಿಟ್ಟು ಯಾವದೇ ಆಗಲಿ ಮತ್ತು ಪ್ರತಿಯೊಂದನ್ನು ಮಾಡುವದು ನನಗೆ ಯಾವಾಗಲೂ ರಹಸ್ಯದಂತೆ ಕಂಡುಬರುತ್ತದೆ.

> ಪೇತ್ರನು ಅವರಿಗೆ ನಿಮ್ಮ ಪಾಪಗಳು ಪರಿಹಾರವಾಗುವದಕ್ಕಾಗಿ ನಿಮ್ಮಲ್ಲಿ ಪ್ರತಿಯೊಬ್ಬರೂ ದೇವರ ಕಡೆಗೆ ತಿರುಗಿಕೊಂಡು ಯೇಸು ಕ್ರಿಸ್ತನ ಹೆಸರಿನ ಮೇಲೆ ದೀಕ್ಷಾಸ್ನಾನ ಮಾಡಿಸಿಕೊಳ್ಳಿರಿ (ಅಪೊಸ್ತರ ಕೃತ್ಯಗಳು 2:38) ಎಂದು ಹೇಳಿದನು.

> "ಈಗ ನೀನೇಕೆ ಸವಾಕಾಶ ಮಾಡುತ್ತಿ? ಎದ್ದು ಆತನ ಹೆಸರನ್ನು ಹೇಳಿಕೊಳ್ಳುವವನಾಗಿ ದೀಕ್ಷಾಸ್ನಾನ ಮಾಡಿಕೊಂಡು ನಿನ್ನ ಪಾಪಗಳನ್ನು ತೊಳೆದುಕೋ" (ಅಪೊಸ್ತಲರ ಕೃತ್ಯಗಳು 22:16).

> "ನೀವೆಲ್ಲರೂ ಕ್ರಿಸ್ತ ಯೇಸುವಿನಲ್ಲಿಟ್ಟಿರುವ ನಂಬಿಕೆಯ ಮೂಲಕ ದೇವರ ಪುತ್ರರಾಗಿ ದ್ದೀರಿ. ಹೇಗೆಂದರೆ ಕ್ರಿಸ್ತನಲ್ಲಿ ಸೇರುವುದಕ್ಕೆ ದೀಕ್ಷಾಸ್ನಾನ ಮಾಡಿಸಿಕೊಂಡಿರುವ ನೀವೆ ಲ್ಲರೂ ಕ್ರಿಸ್ತನನ್ನು ಧರಿಸಿಕೊಂಡಿರಿ" (ಗಲಾತ್ಯ 3:26, 27).

ದೇವರು "ದೊಡ್ಡ ಕಾರ್ಯಗಳನ್ನು" ಮಾಡಲು ಹೇಳಿದ್ದಾದರೆ ನೀನು ಮಾಡುತ್ತಿರಲಿಲ್ಲವೇ? (ಆತನು) "ನಿನಗೆ ಸ್ನಾನಮಾಡು ನೀನು ಶುದ್ಧನಾಗಿರುವಿ ಎಂದು ಹೇಳಿದರೆ ಅದೊಂದು ದೊಡ್ಡ ಕೆಲಸವೇ?"

ಎಲೀಯನ ಈ ಪರಿಹಾರವನ್ನು ಪ್ರಯತ್ನಿಸದೇ ತಿರುಗಿ ಮನೆಗೆ ಹೋಗುವದು ಮೂರ್ಖತನವಾದದ್ದು ಎಂದು ಸೇವಕರು ನಾಮಾನನನ್ನು ಒಪ್ಪಿಸಿದರು. ಹೀಗೆ ಆತನು "ಯೊರ್ದನಿಗೆ ಹೋದನು" (2 ಅರಸು 2:14ಎ). ನದಿಯ ದಂಡೆಯ ಮೇಲೆ ನಿಂತು, ಆತನು ತಾನೇ ತನ್ನ ಬಟ್ಟೆಗಳನ್ನು ತೆಗೆದುಹಾಕಿ, ನೀರೊಳಗೆ ಇಳಿದ ಆತನನ್ನು ನೀವು ನೋಡುತ್ತಿದ್ದೀರಾ? ನೀರಿನ ಆಳದೊಳಕ್ಕೆ ಆತನು ತನ್ನನ್ನು ತಾನು ಎದ್ದಿಕೊಂಡನು, ನಂತರ ನೇರವಾಗಿ ನಿಂತುಕೊಂಡನು. ಆತನು ತನ್ನ ಕೈಯ ಮತ್ತು ಎದೆಯ ಮೇಲಿನ ಚರ್ಮವನ್ನು ನೋಡಿಕೊಂಡನು, ಆದರೆ ಆತನ ಚರ್ಮವು ಅದೇ ರೀತಿಯ ಕ್ಷಯಿಸಿಹೋದ ಕುಷ್ಠದಿಂದ ಕೂಡಿದೆ. ಬಹುಶಃ ಆತನು ತನ್ನ ಮುಖದ ಮೇಲೆ ನಿರಾಶೆಯನ್ನು ತೋರಿಸಿಕೊಂಡನು, ಅವನ ಸೇವಕರಲ್ಲಿ ಒಬ್ಬನು ದಡದಲ್ಲಿ ನಿಂತು ಕೂಗುತ್ತಿದ್ದಾನೆ "ಇದು ಕೇವಲ ಒಂದೇ ಸಾರಿ! ಪ್ರವಾದಿಯು ಹೇಳಿದ್ದು *ಏಳು* ಸಾರಿ" ಎಂದನು.

ವೇದಭಾಗವು ಹೇಳುವುದೇನೆಂದರೆ ನಾಮಾನನು ಒಂದು ಸಾರಿ ಮುಳಿಗೆದ್ದಾಗ, ಆತನು ಏಳರಲ್ಲಿ ಒಂದು ಭಾಗವೂ ಕೂಡಾ ಶುದ್ಧನಾಗಿರಲಿಲ್ಲ; ಮತ್ತು ಎರಡು ಬಾರಿ ಮುಳುಗಿದಾಗಲೂ ಆತನು ಏಳರಲ್ಲಿ ಎರಡು ಭಾಗವೂ ಆತನು ಶುದ್ಧನಾಗಿರಲಿಲ್ಲ. ಬದಲಾಗಿ, ಯಾವುದೇ ಶುದ್ಧಪಡಿಸುವಿಕೆಯು ಆಗುವ ಮೊದಲು ಅದು ಎಲ್ಲ ಏಳು ಮುಳುಗುಳನ್ನು ತೆಗೆದುಕೊಳ್ಳುವಂತದ್ದಾಗಿದೆ. Krummacher ಅವರು ಸೂಚಿಸುವುದೇನೆಂದರೆ, "ಆತನು ಒಂದು ಸಾರಿ ಮುಣುಗಿದನು, ಆದರೆ ಯಾವುದೇ ಪರಿಣಾಮವಾಗಲಿಲ್ಲ; ಎರಡನೆಯ ಸಾರಿ ಕುಷ್ಠವು ಅಲ್ಲಿಂದ ತೊಲಗಲಿಲ್ಲ; ತಿರುಗಿ ಮತ್ತೆ ತಿರುಗಿ ಮಡಿದ ಆದರೆ ಪರಿಣಾಮವು ಅದೇ ಆಗಿತ್ತು,"[7] G. Rawlinson ಅವರು ಬರೆಯುವುದೇನೆಂದರೆ, "ಯಾವುದೇ ಪರಿಣಾಮವನ್ನು ಪಡೆಯದೇ ಒಂದು ವಿಧ್ಯುಕ್ತ ಕಾರ್ಯವನ್ನು ಸಾಧಿಸುವತನಕ ಆರು ಸಾರಿ ಪುನರಾ ವರ್ತಿಸುವದು, ಮತ್ತು ಏಳು ಸಾರಿ ಪುನರಾವರ್ತಿಸುವದು, ನಂಬಿಕೆಯ ಗತಿಯನ್ನು ಮತ್ತು ಮನುಷ್ಯರು ಸಾಮಾನ್ಯವಾಗಿ ಅನುಭವಿಸದ ವಿಶ್ವಾಸದ ಅಪೇಕ್ಷೆಯಾಗಿದೆ."[8]

ನಾನು ಹೀಗೆ ಊಹಿಸುತ್ತೇನೆ ದಂಡೆಯ ಮೇಲೆ ನಿಂತುಕೊಂಡಂತಹ ಸೇವಕರು ಈ ರೀತಿಯಲ್ಲಿ ಎಣಿಸುತ್ತಿರಬಹುದು, "ಅದು ಒಂದು ... ಅದು ಎರಡು ... ಅದು ಮೂರು ಸಾರಿ ..." ಅಂತಿಮವಾಗಿ ನಾಮಾನನು ಏಳನೆಯ ಸಾರಿ ಒಳಕ್ಕೆ ಹೋದನು. ದೇವ ವಾಕ್ಯವು ಹೇಳುವುದೇನೆಂದರೆ "ಅವನು ಯೊರ್ದನಿಗೆ ಹೋಗಿ ಏಳು ಸಾರಿ ಅದರಲ್ಲಿ ಮುಳುಗಿ ಎದ್ದನು" (ವಚನ 14ಬಿ). ಆತನು ನೀರಿನ ಆಳಕ್ಕೆ ಮುಳುಗಿದಾಗ ಆತನ ದೇಹದ ನರಗಳು ಹಾರಲು ಆರಂಭಿಸಿದವೇ? ಆತನ ದೇಹದ ನರಗಳುದ್ದಕ್ಕೂ ಹೊಸ ಜೀವನ ಹರಿಯಲಾರಂಭಿಸಿತೇ? ಆತನು ಹೊಸದಾದ ಶಕ್ತಿಯು ಸುರಿಯುವಂತದ್ದನ್ನು ಅನುಭವಿಸಿದನೇ?[9] ಇದು ನನಗೆ ತಿಳಿಯದು, ಆದರೆ ವೇದವಾಕ್ಯವು ಹೇಳುವುದೇನೆಂದರೆ[10] ಆತನು ನೀರಿನಿಂದ ಮೇಲೆದ್ದು ಬಂದಾಗ, "ಆತನ ದೇಹವು ಕೂಸಿನ ದೇಹದಂತೆ ಶುದ್ಧವಾಗಿತ್ತು" (ವಚನ 14ಸಿ). ಮುಂದಿನ ಸಾರಿ ನಾವು ಮಗುವನ್ನು ನೋಡುವಾಗ, ಅದರ ಮೃದುತ್ವ, ಸುಂದರತೆ, ಸುಂದರವಾದ ಚರ್ಮ, ಇವುಗಳತ್ತ ನೋಡುತ್ತಾ ನಾಮಾನನ ದೇಹವು ಅದರಂತೆ ಆಗಿತ್ತು! ಒಬ್ಬ ಲೇಖಕರು "ಈ ಹೊಸ ನಾಮಾನನನ್ನು" ಈ ರೀತಿಯಲ್ಲಿ ವರ್ಣಿಸಿದ್ದಾರೆ:

> ... ಆತನ ಮುಖಭಾವ ಹೊಳೆಯತೊಡಗಿತ್ತು, ಮತ್ತು ಆತನ ಕಣ್ಣುಗಳು ಪ್ರಖರವಾಗಿ ಹೊಳೆಯ ತೊಡಗಿದವು, ಆತನು ಯೌವನ ಬಲ ಮತ್ತು ಉತ್ಸಾಹಗಳಿಂದ ತುಂಬಿದವನಾದನು. ಆತನ ಕುಷ್ಠವು ಪ್ರವಾಹದ ಅಡಿಯಲ್ಲಿ ಕೊಚ್ಚಿಹೋಯಿತು, ಮತ್ತು ಆತನ ಕೊಳಕಾದ ದೇಹವು ತಿರುಗಿ ವಾಸಿಯಾಯಿತು, ಆತನು ಚಿಕ್ಕ ಮಗುವಿನಂತೆ ನವೀನವಾದ ಮತ್ತು ಆರೋಗ್ಯಯುತವಾಗಿಯೂ, ಅಂಗಾಲಿನಿಂದ ನಡುನೆತ್ತಿಯವರೆಗೆ ಆತನು ಶುದ್ಧನಾಗಿಯೇ ಇದ್ದನು![11]

ನಾಮಾನನ ಕಾಲುಗಳು ಪ್ರವಾದಿಯ ಮನೆಯ ಹತ್ತಿರ ಹೆಜ್ಜೆಹಾಕುವುದನ್ನು ಮತ್ತು ಪಶ್ಚಾತ್ತಾಪಡಲು ಹೋಗುವುದನ್ನು ಮತ್ತೇ ನೆನಪಿಗೆ ತಂದವು: "ಇಸ್ರಾಯೇಲ್ ದೇಶದಲ್ಲಿರುವ ದೇವರ ಹೊರತಾಗಿ ಲೋಕದಲ್ಲಿ ಬೇರೆ ದೇವರು ಇರುವುದೇ ಇಲ್ಲವೆಂಬುದು ಈಗ ನನಗೆ ಗೊತ್ತಾಯಿತು" (ವಚನ 15ಬಿ). ಇದು ಕೇವಲ ನೀರಿನಿಂದ ಶುದ್ಧ ವಾದುದಲ್ಲ ಎಂಬುದನ್ನು ನಾಮಾನನು ಅರಿತುಕೊಂಡನು. ಒಂದು ವೇಳೆ ಯೊರ್ದನ್ನಿನ ಹೊಳೆಯ ನೀರಿಗೆ ಕುಷ್ಠವನ್ನು ವಾಸಿ ಮಾಡಿದ ಶಕ್ತಿಯು ಇರುವುದಾದರೆ, ಆತನು ತನ್ನ ಮಾರ್ಗದಲ್ಲಿ ಬರುವ ಜಗತ್ತಿನಾದ್ಯಂತದ ಕುಷ್ಠರೋಗಿಗಳ ಸಮೂಹದೊಂದಿಗೆ ಹೋರಾಟಮಾಡಬೇಕಿತ್ತು. ಬದಲಾಗಿ, ದೇವರಿಂದಲೇ - ನಿಜವಾದ ದೇವರಿಂದ, ಇಸ್ರಾಯೇಲ್ಯರ ದೇವರಿಂದಲೇ ತಾನು ವಾಸಿಯಾಗಿರುವದನ್ನು ಆತನು ಅರಿತುಕೊಂಡನು ಮತ್ತು ತನ್ನನ್ನು ಆತನನ್ನು ಆರಾಧಿಸಲು ಮತ್ತು ಆತನೊಬ್ಬನನ್ನೇ ಸೇವಿಸಲು ಒಪ್ಪಿಸಿಕೊಟ್ಟನು (ವಚನ 17ಬಿ).

**ದೇವರ ಕೃಪೆಯಿಂದ ರಕ್ಷಿಲ್ಪಟ್ಟನು**

ತಿರುಗಿ ನಾವು ಯೆಹೋವನೆಡೆಗೆ ನಮ್ಮ ಪ್ರತಿಕ್ರಿಯೆಯನ್ನು ಎರಡು ಸಮಾನತೆಗಳ ದೃಷ್ಟಿಯಲ್ಲಿ ನೋಡುವಾಗ ಕರ್ತನು ಹೇಳುವುದೇನೆಂದರೆ ಒಬ್ಬ ಪಾಪಿಯು "ಕುಷ್ಠದ" ಪಾಪಕ್ಕೆ ಒಳಗಾದಾಗ ನಂಬಿ (ಯೋಹಾನ 3:16; ಎಫೆಸ 2:8), ಪಶ್ಚಾತ್ತಾಪಪಟ್ಟು (ಲೂಕ 13:3; ಅಪೊಸ್ತಲರ ಕೃತ್ಯಗಳು 17:30), ಕ್ರಿಸ್ತನಲ್ಲಿ ಪಾಪದ ಅರಿಕೆಯನ್ನು ಮಾಡಬೇಕು (ಮತ್ತಾಯ 10:32; ರೋಮಾಪುರ 10:9, 10), ಮತ್ತು ನೀರಿನಲ್ಲಿ (ಮುಣುಗಿಸಬೇಕು) ದೀಕ್ಷಾಸ್ನಾನ ಹೊಂದಬೇಕು (ಮಾರ್ಕ 16:16; ಅಪೊಸ್ತಲರ ಕೃತ್ಯಗಳು 2:38). ಇದಕ್ಕೆ ಉತ್ತರವಾಗಿ ಪಾಪಿಯು ನಂಬುವವನಾಗಿರುತ್ತಾನೆ. ಆತನು ಅರ್ಧದ ಒಂದು ಭಾಗದಷ್ಟು ಶುದ್ಧನಾಗಿರುತ್ತಾನೆಯೇ? ಇಲ್ಲ. ಇದರ ಜೊತೆ ದೇವರು ಆತನಿಗೆ ಮತ್ತು ಹೇಳುವುದೇ ನೆಂದರೆ ಪಶ್ಚಾತ್ತಾಪಪಡಬೇಕು ಮತ್ತು ದೀಕ್ಷಾಸ್ನಾನ ಹೊಂದಬೇಕು ಎಂದು. ನಂತರ ಆತನು

ಪಶ್ಚಾತ್ತಾಪ ಪಡುತ್ತಾನೆ. ಈಗ ಅರ್ಧದಷ್ಟು ಶುದ್ಧನಾದನೋ? ಇಲ್ಲ ದೇವರು ಆತನಿಗೆ ಪಾಪದ ಅರಿಕೆ ಮಾಡು ದೀಕ್ಷಾಸ್ನಾನ ಹೊಂದು ಎಂದು. ಆತನು ತಾನು ಯೇಸುವನ್ನು ಕ್ರಿಸ್ತನೆಂದು, ಜೀವಿಸುವ ದೇವರ ಮಗನೆಂದು ನಂಬುವ ಅರಿಕೆಯನ್ನು ಮಾಡುತ್ತಾನೆ. ಇದಾದರೆ ಮೂರು ನಾಲ್ಕಾಂಶದಷ್ಟು ಶುದ್ಧನಾದನೇ? ಇಲ್ಲ ದೇವರು ದೀಕ್ಷಾಸ್ನಾನದ ಆಜ್ಞೆಯನ್ನು ಕೊಟ್ಟಿದ್ದಾನೆ. ಹೇಗೋ, ತನ್ನ ಹೃದಯದಲ್ಲಿನ ನಂಬಿಕೆಯೊಡನೆ ಪಾಪಿಯು ದೀಕ್ಷಾಸ್ನಾನಕ್ಕಾಗಿ ನೀರಿನ ತಗ್ಗಿನಲ್ಲಿ ಹೋಗಿ ಮೇಲಕ್ಕೆ ಬಂದಾಗ (ನೋಡಿರಿ ರೋಮಾಪುರ 6:3, 4), ಆತನ ಆತ್ಮವು ಚಿಕ್ಕಮಗುವಿನ ಆತ್ಮದಂತೆ ಶುದ್ಧವಾಗಿರುತ್ತದೆ (ಅಪೊಸ್ತಲರ ಕೃತ್ಯಗಳು 22:16; ನೋಡಿರಿ ಮತ್ತಾಯ 18:3)! ಆತನು ಯೇಸುವಿನಲ್ಲಿ ಹೊಸ ಜೀವವನ್ನು ಹೊಂದಿದ್ದಾನೆ (ರೊಮಾಪುರ 6:4); ಆತನು ಹೊಸದಾದ ಜೀವಿಯಾಗಿದ್ದಾನೆ (2 ಕೊರಿಂಥ 5:17)!

ಇದರ ಅರ್ಥ ದೀಕ್ಷಾಸ್ನಾನದಲ್ಲಿ ಶಕ್ತಿ ಇದೆ ಎಂದು ಇದರ ಅರ್ಥವೇ? ಅಲ್ಲಿ ಯೊರ್ದನ ಹೊಳೆಯಲ್ಲಿರುವಂತೆಯೇ ಯಾವ ಶಕ್ತಿಯೂ ಇರುವುದಿಲ್ಲ ದೇವರು ಶುದ್ಧ ಮಾಡುತ್ತಾನೆ. ಆತನೊಬ್ಬನೇ ಶಕ್ತಿಯನ್ನು ಹೊಂದಿದ್ದಾನೆ; ಆತನೊಬ್ಬನಿಗೆ ಅಧಿಕಾರವಿದೆ. ಹೇಗೋ, ನಾಮಾನನು ದೇವರ ಸೇವಕನಾದ ಎಲೀಷನು ಹೇಳಿದಂತೆಯೇ ಸರಿಯಾಗಿ ಮಾಡಿದ್ದಾದರೆ, ನಿನ್ನನ್ನೂ ಸಹ ನಿನ್ನ ಪಾಪದ ದೋಷದಿಂದ ಶುದ್ಧಮಾಡುವುದಾಗಿ ದೇವರು ವಾಗ್ದಾನ ಮಾಡುತ್ತಾನೆ.

## ಮುಕ್ತಾಯ

ದೇವರು ನಾಮಾನನನ್ನು ಹಂತಹಂತವಾಗಿ ಆತನ ಕುಷ್ಠದಿಂದ ಹೇಗೆ ವಾಸಿ ಮಾಡಿದನು ಮತ್ತು ಮುಖ್ಯವಾಗಿ ಆತನನ್ನು ಹೇಗೆ ವಿಶ್ವಾಸಿಯಾಗಿ ಮಾರ್ಪಡಿಸಿದನು ಎಂಬುದನ್ನು ಧ್ಯಾನಿಸುವದು ಅದ್ಭುತವಾದುದ್ದು. ಯಾವುದೇ ಸಂಗತಿಯಲ್ಲಿ, ಹೇಗೋ, ಆತನ ಯೋಜನೆಯನ್ನು ನಿಷ್ಫಲಗೊಳಿಸಬಹುದಿತ್ತು. ನಿರ್ಧಾರದ ಘಳಿಗೆಗೆ ನಿಮ್ಮನ್ನು ತರುವ ನಿಮ್ಮ ಜೀವಿತದಲ್ಲಿ ಸಂಭವಿಸಿದ ಎಲ್ಲವುಗಳನ್ನು ಯೋಚಿಸಿರಿ. ಕರ್ತನ ಕೈಯನ್ನು ನೀವು ಕಾಣುವವ ರಾಗಿದ್ದೀರೋ; ಆತನ ಕಳಕಳಿಯನ್ನು ನೀವು ಕಂಡಿದ್ದೀರಾ? ದೇವರು ನಿನ್ನನ್ನು ಪಾಪದ ಕುಷ್ಠದಿಂದ ವಾಸಿಮಾಡಬಯಸುತ್ತಾನೆ (ನೋಡಿರಿ 2 ಪೇತ್ರ 3:9); ಆದರೆ ನಾಮಾನನೂ ಸಹ ತನಗಾಗಿನ ದೇವರ ಯೋಜನೆಯನ್ನು ನಿಷ್ಫಲಗೊಳಿಸಬಹುದಾದಂತಹದನ್ನೂ ನೀನೂ ಮಾಡಬಹುದು. Dwight L. Moody ಯವರು ಹೀಗೆ ಬರೆಯುತ್ತಾರೆ, ನಾಮಾನನು "ತನ್ನ ಗರ್ವವನ್ನು ಕಳೆದುಕೊಂಡನು; ನಂತರ ತನ್ನ ಕುಷ್ಠವನ್ನು ಕಳೆದುಕೊಂಡನು; ಸಾಮಾನ್ಯವಾಗಿ ಈ ಕ್ರಮದಲ್ಲಿ ಗರ್ವಿಯಾದ ಮೊಂಡನಾದ ಪಾಪಿಯು ಪರಿವರ್ತನೆಗೊಳ್ಳುತ್ತಾನೆ"[12] ಒಂದು ವೇಳೆ ಗರ್ವವು ನಿನ್ನನ್ನು ಹಿಂದಕ್ಕೆ ಎಳೆಯುತ್ತಿರುವುದಾದರೆ, ಅದನ್ನು ಇಂದು ಕಳಚಿಡಿಬಿಡು. "ತನ್ನನ್ನು ಹೆಚ್ಚಿಸಿಕೊಳ್ಳುವ ಪ್ರತಿಯೊಬ್ಬನೂ ತಗ್ಗಿಸಲ್ಪಡುವನು; ತನ್ನನ್ನು ತಗ್ಗಿಸಿಕೊಳ್ಳುವವನು ಹೆಚ್ಚಿಸಲ್ಪಡುವನು" ಎಂಬುದು ಇನ್ನೂ ನಿಜವಾಗಿದೆ. ಕರ್ತನೆಡೆಗೆ ವಿನಯದಿಂದ, ವಿಶ್ವಾಸದ ವಿಧೇಯತೆಯಿಂದ ಬನ್ನಿರಿ.

---

ಟಿಪ್ಪಣೆಗಳು

[1]Warren W. Wiersbe, *Be Distinct* (Colorado Springs, Colo.: Victor, 2002), 37. [2]F. W. Krummacher, *Elisha, a Prophet for Our Times* (Grand Rapids, Mich.: Kregel Publications, 1993), 147. [3]Robert Lowry, "Nothing but the Blood," *Songs of Faith and Praise*, comp. and ed. Alton H. Howard (West Monroe, La.: Howard Publishing Co., 1994). [4]Wiersbe ನಲ್ಲಿ ಉದಾಹರಿಸಲ್ಪಟ್ಟದ್ದು, 38. [5]Henry Blunt, *Lectures on the History of*

*Elisha* (Philidelphia: Herman Hooker, 1839), 93; J. Robert Vannoy, notes on 2 Kings, *The NIV Study Bible*, ed. Kenneth Barker (Grand Rapids, Mich.: Zondervan Publishing House, 1985), 532. [6]ಈ ಪದಪುಂಜವು Charles Swindoll ರವರ, "ನಾಮಾನ ಮತ್ತು ಗೇಹಜಿ ವ್ಯಕ್ತಿಗಳಲ್ಲಿನ ವ್ಯತ್ಯಾಸ" ರೆಡಿಯೋ ಪ್ರಸಂಗದಿಂದ ಬಂದಿದೆ. [7]Krummacher, 149. See Elaine J. Fletcher, *Elisha, the Miracle Prophet* (Washington, DC: Review and Herald Publishing Association, 1960), 48. [8]G. Rawlinson, "2 Kings," *The Pulpit Commentary*, vol. 5, *1 & 2 Kings*, ed H. D. M. Spence and Joseph S. Exell (Grand Rapids, Mich.: Wm. B. Eerdmans Publishing Co., 1950), 94. [9]ಈ ವಾಕ್ಯ ಮತ್ತು ಹಿಂದಿನ ಎರಡು ವಾಕ್ಯಗಳು ಪದಗಳ ಮೂಲಕ Krummacher, ರವರಿಂದ ಸೂಚಿಸಲ್ಪಟ್ಟಿವೆ, 150. [10]ಒಂದು ವೇಳೆ ನಾಮಾನನು ಪರಮಾವಧಿಯನ್ನು ಕಳೆದುಕೊಂಡಿದ್ದರೆ ಅದು ಆತನ ಕುಷ್ಠದಂದಲೇ, ಇಲ್ಲಿ ಬಳಸಿದ ಪದವುಸಹ ಸೂಚಿಸುವುದೇನೆಂದರೆ ಅವರು ಸಹ "ಗುಣಪಡಿಸಲ್ಪಟ್ಟರು" ಎಂದರು.

[11]Krummacher, 150. [12]Wiersbe, 39 ನಲ್ಲಿ ವ್ಯಾಖ್ಯಾನಿಸಲ್ಪಟ್ಟದ್ದು.